# ಉಡುಪಿ–ಕೃಷ್ಣ

–ಬನ್ನಂಜೆ ಗೋವಿಂದಾಚಾರ್ಯ

ಉಡುಪಿಯ ಕಂಡೀರಾ
ಉಡುಪಿಯ ಕೃಷ್ಣನ ಕಂಡೀರಾ
ಕೃಷ್ಣನ ಕಂಡೀರಾ
ಕೃಷ್ಣನ ಉಡುಪಿಯ ಕಂಡೀರಾ

ಜಗದೊಡೆಯ ಬಂದ ಉಡುಪಿಯಲಿ ನಿಂದ ಪಡುಗಡಲ ದಾರಿಯಿಂದ
ಮಿಗಿಲುಂಟೆ ಚಂದ ಕಣ್ಣಿಗಾನಂದ ಆನಂದಕಂದನಿಂದ ।
ದ್ವಾರಕೆಯ ವಾಸ ಓ ಹೃಷೀಕೇಶ ಸಾಕೆನಿಸಿತೇನು ಈಶ
ವಾರಿಯಲಿ ಬಂದೆ ದಾರಿಯಲಿ ನಿಂದೆ ನೀ ದಾಟಿ ದೇಶದೇಶ ॥ ೧ ॥

ಕಡಗೋಲುಕೈಯ ಕಡುನೀಲಿಮೈಯ ಈ ಬಾಲರೂಪ ಕಂಡು
ಪೊಡಮಡದ ಶಿರವೋ ಜೋಡಿಸದ ಕರವೋ ಬರಿ ಹುಲ್ಲು ಮಣ್ಣು ಜೊಂಡು ।
ಆ ಮುಗುಳುನಗೆಗೆ ಆ ನಿಂತ ಬಗೆಗೆ ಮರುಳಾದಳಂತೆ ಗೋಪಿ
ಶ್ರೀಮಧ್ವಗೊಲಿದ ಕೃಷ್ಣನನೆಗೆಲಿದ ವೆಗ್ಗಳದ ನಾಡು ಉಡುಪಿ ॥ ೨ ॥

ಪಡುಗಡಲ ತೀರದಿಂದೆದ್ದು ಬಾರ ಕಡೆಗೋಲು ಹಗ್ಗ ಹಿಡಿದು
ಬಿಡುಗಡೆಯ ದಾರಿ ಭಕ್ತರಿಗೆ ತೋರಿ ನಮ್ಮೆದೆಯ ಬೆಣ್ಣೆ ಕಡೆದು ।
ಆನಂದತೀರ್ಥರೀಕರೆಗೆ ಪಾರ್ಥಸಾರಥಿಯು ಕರಗಿ ಬಂದು
ತಾ ನಿಂದ ಕಲ್ಲಿನೊಳಗಿಂದ ಇಲ್ಲಿ ವೈಕುಂಠವನ್ನೇ ತಂದು ॥ ೩ ॥

ಉಡುಪಿಯ ಕಂಡೀರಾ
ಉಡುಪಿಯ ಕೃಷ್ಣನ ಕಂಡೀರಾ
ಕೃಷ್ಣನ ಕಂಡೀರಾ
ಕೃಷ್ಣನ ಉಡುಪಿಯ ಕಂಡೀರಾ